# ಅಧಿಕಾರ

# POWER

ಸ್ಟೀವನ್ ಲ್ಯೂಕ್ಸ್

ಅಧಿಕಾರ ಎಂಬ ಪದವು, ಪ್ರಭಾವ, ದಬ್ಬಾಳಿಕೆ, ಬಲ, ಹಿಂಸಾಚಾರ, ಕುಶಲತೆ, ಶಕ್ತಿ, ಅಧಿಕಾರ ಮತ್ತು ಮೊದಲಾದವುಗಳನ್ನು ಒಳಗೊಂಡಿರುವ ಒಂದು ಶಬ್ದಾರ್ಥವಾಗಿದ್ದು, ಶಬ್ದಾರ್ಥಶಾಸ್ತ್ರ ಕ್ಷೇತ್ರದ ಮುಖ್ಯ ಅಂಶವಾಗಿದೆ. ಸಾಮಾನ್ಯವಾಗಿ ದಿನನಿತ್ಯದ ಚರ್ಚೆಯಲ್ಲಿ ನಾವು ಈ ಪದಗಳನ್ನು ಸಾರ್ವಕಾಲಿಕವಾಗಿ ಬಳಸುತ್ತೇವೆ ಮತ್ತು ಈ ಪದಗಳ ಅರ್ಥ ಏನು ಎಂಬುದು ಸಾಮಾನ್ಯವಾಗಿ ನಮಗೆ ಗೊತ್ತಿರುವ ವಿಷಯವೇ ಆಗಿದೆ. ಹಾಗೂ ಇನ್ನೂ ಕೆಲವು ವಿದ್ವಾಂಸರು ಈ ಪದದ ವ್ಯಾಖ್ಯಾನವನ್ನು ಬಿಡುವಿಲ್ಲದ ಹಾಗೆ ಚರ್ಚಿಸುತ್ತಾರೆ. ಇಂತಹ ವಿವಾದಗಳು ಬಹಳ ಮುಖ್ಯವಾಗುತ್ತದೆ ಏಕೆಂದರೆ ಅಧಿಕಾರದ ಬಗ್ಗೆ ನಾವು ಹೇಗೆ ಯೋಚಿಸುತ್ತೇವೆ ಎಂಬುದು ಮಹತ್ತರವಾದ ಪರಿಣಾಮಗಳನ್ನು ಉಂಟುಮಾಡುತ್ತದೆ. ಉದಾಹರಣೆಗೆ, ಮತದಾರರು ಅಭ್ಯರ್ಥಿಗಳಲ್ಲಿ ಯಾರು "ಹೆಚ್ಚು ಬಲಶಾಲಿಗಳಾಗಿ" ಕಾಣುತ್ತಾರೋ ಅಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡಬಹುದು, ಮತ್ತು "ಬಲಶಾಲಿ" ಯಾರು ಎನ್ನುವುದು "ಶಕ್ತಿಯುತ" ದ ಬಗ್ಗೆ ಅವರಿಗಿರುವ ಪರಿಕಲ್ಪನೆಯ ಮೇಲೆ ಆಧಾರಿತದ್ದಾಗಿರುತ್ತದೆ.

ಅದರ ಅತ್ಯಂತ ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ, ಅಧಿಕಾರವು ಕೇವಲ ಫಲಿತಾಂಶಗಳನ್ನು ತರುವ ಸಾಮರ್ಥ್ಯವನ್ನು ಹೊಂದಿದೆ ಎಂದರ್ಥ. ಅಧಿಕಾರದ ಎರಡು ತರ್ಕ ದೋಷಗಳನ್ನು ನಿವಾರಿಸುವುದು ಇಲ್ಲಿ ಅತ್ಯಂತ ಮುಖ್ಯವಾಗಿದೆ. ಅವುಗಳಲ್ಲಿ ಮೊದಲನೆಯದು "ಚಲಾಯಿಸುವಿಕೆಯ ತರ್ಕಾಭಾಸ": ನಾವು ಯಾವಾಗ ಅಧಿಕಾರವನ್ನು ಅದರ ಚಲಾಯಿಸುವಿಕೆಯೊಂದಿಗೆ ಸಮವೆಂದು ಪರಿಗಣಿಸುತ್ತೇವೆಯೋ, ನಾವು ಯಾವಾಗ ಅಧಿಕಾರವನ್ನು ವಿಜಯವೆಂದು ವ್ಯಾಖ್ಯಾನಿಸುತ್ತೇವೆಯೋ, ನಾವು ಯಾವಾಗ ನಿರ್ಧಾರ ತೆಗೆದುಕೊಳ್ಳುವಲ್ಲಿ ಯಶಸ್ಸನ್ನು ಸಾಧಿಸುತ್ತೇವೆಯೋ ಅಥವಾ ಇತರರ ಮೇಲೆ ಅಧಿಕಾರವು ಚಾಲ್ತಿಯಲ್ಲಿರುತ್ತದೆಯೋ ಆಗ ಚಲಾಯಿಸುವಿಕೆಯ ತರ್ಕಾಭಾಸವು ಸಂಭವಿಸುತ್ತದೆ. ಅಧಿಕಾರದ ಪರಿಕಲ್ಪನೆಯನ್ನು ಕಾರ್ಯಾಚರಣೆಗೆ ತರಬೇಕೆಂಬ ಬಯಕೆಯು ಬಹುಶ: ಈ ತರ್ಕ ದೋಷಕ್ಕೆ ಕಾರಣವಾಗಬಹುದು, ಆದರೆ ಅಧಿಕಾರವು ಒಂದು ರೀತಿಯ ಸ್ವಾಭಾವಿಕ ಪರಿಕಲ್ಪನೆಯಾಗಿದೆ: ಇದು ಎಂದಿಗೂ ವಾಸ್ತವಿಕವಾಗದಿರಬಹುದಾದ ಒಂದು ಸಂಭಾವ್ಯತೆಯನ್ನು ಸೂಚಿಸುತ್ತದೆ. ( ಒಂದು ಭಿದುರ ಕಿಟಕಿಯು ಎಂದಿಗೂ ಮುರಿಯದೇ ಇರುವ ಹಾಗೆ).

ಇನ್ನು, ಎರಡನೆಯ ತರ್ಕ ದೋಷವು ಯಾವುದೆಂದರೆ, ಅದು "ಚಲಿಸುವಿಕೆಯ ತರ್ಕಾಭಾಸ", ಇದು ಸಾಮಾನ್ಯವಾಗಿ ಅಧಿಕಾರದ ಸಾಧನ ಅಥವಾ ಸಂಪನ್ಮೂಲಗಳೊಂದಿಗೆ ನಾವು ಅಧಿಕಾರವನ್ನು ಸಮನ್ವಯಗೊಳಿಸಿದಾಗ ಸಂಭವಿಸುತ್ತದೆ. ಸಮಾಜಶಾಸ್ತ್ರಜ್ಞರು ಕೆಲವೊಮ್ಮೆ ಸಂಪತ್ತು ಅಥವಾ ಸಾಮಾಜಿಕ ಸ್ಥಾನಮಾನದೊಂದಿಗೆ ಅಧಿಕಾರ ಅಥವಾ ಬಲಾಢ್ಯತೆಯನ್ನು ಗುರುತಿಸುತ್ತಾರೆ ಮತ್ತು ಮಿಲಿಟರಿ ವಿಶ್ಲೇಷಕರು ಕೆಲವೊಮ್ಮೆ ಅಧಿಕಾರವನ್ನು ಮಿಲಿಟರಿ ಪಡೆಗಳು ಮತ್ತು ಶಸ್ತ್ರಾಸ್ತ್ರಗಳ ವಿಷಯದಲ್ಲಿ ಅಳೆಯುತ್ತಾರೆ. ಆದರೆ ಆದರೆ ಅಧಿಕಾರದ ಸಾಧನಗಳನ್ನು ಹೊಂದಿರುವುದರಿಂದ ಶಕ್ತಿಶಾಲಿಗಳಾಗುವುದಿಲ್ಲ ಎಂದು ವಿಯೆಟ್ನಾಮ್ ಮತ್ತು ಇರಾಕ್‌ನಲ್ಲಿ ಅಮೇರಿಕಾಗೆ ಕಂಡುಬಂದಂತೆ.

ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶಗಳಲ್ಲಿ, ನಾವು ಗಮನಾರ್ಹವಾದ ಫಲಿತಾಂಶಗಳನ್ನು ತರುವ ಜವಾಬ್ದಾರಿಯನ್ನುಪ್ರತಿನಿಧಿಗಳಿಗೆ ವಹಿಸಿದಾಗ ಅವರಿಗೆ ನಾವು ಅಧಿಕಾರವನ್ನು ಆರೋಪಿಸುತ್ತೇವೆ. ಯಾವಾಗ ಪ್ರತಿನಿಧಿ ಮತ್ತು ಫಲಿತಾಂಶ ಎರಡನ್ನೂ ಸ್ಪಷ್ಟಪಡಿಸಲಾಗಿರುತ್ತದೆಯೋ ಆಗ ಈ ಸಂಬಂಧವನ್ನು ನಾವು ನೇರವಾಗಿ ಕಾಣಬಹುದು (ಅಮೇರಿಕಾದ ನ್ಯಾಯವಿಧಾಯಕ ಸಭೆಗೆ ಸಂಬಂಧಿಸಿದ ಬಿಲ್ಲುಗಳನ್ನು ನಿರಾಕರಿಸುವ ಅಧಿಕಾರ ಅಲ್ಲಿಯ ಅಧ್ಯಕ್ಷರಿಗೆ ಇದ್ದ ಹಾಗೆ). ಆದರೆ ನಾವು ಅಧಿಕಾರವನ್ನು ಗುರುತಿಸುವುದು ಹೇಗೆ ಎಂಬುದನ್ನು ತಿಳಿಯಲು ಬಯಸುತ್ತೇವೆ (ಅದನ್ನು ಯಾರು ಹೊಂದಿರುತ್ತಾರೆ? ಯಾರು ಅದನ್ನು ಅನುಷ್ಠಾನ ಮಾಡಬಹುದು? ಹಾಗೂ ಯಾರು ಅದನ್ನು ಹೆಚ್ಚಾಗಿ ಚಲಾಯಿಸಿದ್ದಾರೆ ಮತ್ತು ಕಡಿಮೆಯಾಗಿ ಬಳಸಿದ್ದಾರೆ?). ನಾವು ಕೂಡ ಅದರ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಬಯಸುತ್ತೇವೆ (ಯಾರು ಯಾವ ರೀತಿಗಳಲ್ಲಿ ಅದರಿಂದ ಪ್ರಭಾವಿತರಾಗಿದ್ದಾರೆ ಎಂಬುದನ್ನು ತಿಳಿಯಲು). ಇಂತಹ ವಿಚಾರಣೆಗಳು, ಅಧಿಕಾರವಿರುವವರು ಎಂದು ಭಾವಿಸಲಾದವರು, ತಮ್ಮ ಅಧಿಕಾರವನ್ನು ಚಲಾಯಿಸಿದಾಗ ಅವರಿಗೆ ಕಾರಣಾರ್ಥಕ ಜವಾಬ್ದಾರಿಯನ್ನು ಆರೋಪಿಸುತ್ತದೆ ಮತ್ತು ಇದರೊಂದಿಗೆ ನೈತಿಕ, ರಾಜಕೀಯ, ಕಾನೂನುಬದ್ಧ ಅಥವಾ ಐತಿಹಾಸಿಕ ಜವಾಬ್ದಾರಿಯನ್ನು ಸ್ವಲ್ಪ ಮಟ್ಟಿಗೆ ಹೊಂದಿದವರಾಗಿ ಅವರ ಅಧಿಕಾರದ ಪರಿಣಾಮಗಳಿಗೆ ಅವರು ಉತ್ತರದಾಯಿತ್ವರೆಂದು ಗುರುತಿಸುತ್ತದೆ. ಜನರ ಹಿತಾಸಕ್ತಿಗಳ ಮೇಲೆ ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ಪರಿಣಾಮ ಬೀರುವುದನ್ನು ನೋಡುವುದರ ಮೂಲಕ ಆ ಪರಿಣಾಮಗಳಿಗೆ ಅವರು ಹೆಚ್ಚು ಮಹತ್ವ ನೀಡುತ್ತಾರೆ. (ಸಂಪೂರ್ಣವಾಗಿ ಕ್ಷುಲ್ಲಕ ಪರಿಣಾಮಗಳು ಶಕ್ತಿಯುತವನ್ನು ಸೂಚಿಸುವುದಿಲ್ಲ.) ಮತ್ತು ಈ ರೀತಿಯ ವಿಚಾರಣೆಗಳು ಕಾರ್ಯತಂತ್ರತೆಯನ್ನು ಒಳಗೊಂಡಿರ ಬೇಕಾಗುತ್ತದೆ – ಶಕ್ತಿಯುತರು ಅವರು ತರಬಹುದಾದ ಫಲಿತಾಂಶಗಳೊಂದಿಗೆ ಸಂಬಂಧ ಕಲ್ಪಿಸುವ ಒಂದು ಕಾರಣಾರ್ಥಕ ಪ್ರಕ್ರಿಯೆ..

ಈಗಾಗಲೇ ಅಧಿಕಾರಕ್ಕೆ ಜವಾಬ್ದಾರಿ (ಪ್ರತಿನಿಧಿಗಳನ್ನು ಉತ್ತರದಾಯಿತ್ವರನ್ನಾಗಿ ಮಾಡುವ) ಮತ್ತು ಮಹತ್ವವನ್ನು ಆರೋಪಿಸುವುದರಿಂದ (ಜನರ ಹಿತಾಸಕ್ತಿಗಳು ಯಾವುದರ ಮೇಲೆ ಕೇಂದ್ರಿತವಾಗಿದೆ) ವಿವಾದವು ತಲೆ ಎತ್ತಿದೆ. ಸಂಕೀರ್ಣ ಸಂದರ್ಭಗಳಲ್ಲಿ ನಾವು ಪ್ರತಿನಿಧಿಗಳ ಜವಾಬ್ದಾರಿಯನ್ನು ಹೇಗೆ ಬೇರ್ಪಡಿಸಬೇಕು? ಉದಾಹರಣೆಗೆ, ಕತ್ರಿನಾ ಚಂಡಮಾರುತಕ್ಕೆ (ಮತ್ತು ಯಾವ ಅರ್ಥದಲ್ಲಿ "ಜವಾಬ್ದಾರಿ" - ನೈತಿಕ, ರಾಜಕೀಯ, ಕಾನೂನು) ಯಾರು ಯಾವ ಅರ್ಥದಲ್ಲಿ ಅಸರ್ಹವಾದ ಪ್ರತಿಕ್ರಿಯೆಗೆ ಕಾರಣರಾಗಿದ್ದರು? ಮತ್ತು ಯಾರ ಹಿತಾಸಕ್ತಿಗಳು ಇತರರಿಗಿಂತ ಹೆಚ್ಚು ಮೌಲ್ಯವನ್ನು ಹೊಂದಿವೆ ಎಂದು ನಾವು ಹೇಗೆ ನಿರ್ಣಯಿಸುತ್ತೇವೆ? (ಏಕೆಂದರೆ, ಒಂದು ವೇಳೆ ನಾನು ನಿಮ್ಮ ಪ್ರಮುಖ ಅಥವಾ ಮೂಲಭೂತ ಹಿತಾಸಕ್ತಿಗಳನ್ನು ಆಳವಾಗಿ, ಮೇಲ್ನೋಟಕ್ಕಲ್ಲದೆ ಪ್ರಭಾವಿಸಿದರೆ, ನನ್ನ ಅಧಿಕಾರ, ನಿಮ್ಮಗೆ ಸಂಬಂಧಿಸಿದಂತೆ, ಹೆಚ್ಚಿನದಾಗಿರುತ್ತದೆ). ಮಲ್ಟಿಮೀಡಿಯಾದ ಪ್ರಖ್ಯಾತರು ಪ್ರಸಿದ್ಧ ವ್ಯಕ್ತಿಗಳಿಗಿಂತ ಹೆಚ್ಚಿನ ಶಕ್ತಿಯನ್ನು ಹೊಂದಿರುತ್ತಾರೆ, ಹಾಗೂ ಜನರಿಗೆ ಜೀವಧಾನ ನೀಡುವ ಅಥವಾ ಮರಣ ಶಿಕ್ಷೆ ವಿಧಿಸುವ ನ್ಯಾಯಾಧೀಶರಿಗೆ ಹಾಗೆ ತೀರ್ಮಾನ ಮಾಡುವ ಅಧಿಕಾರವಿಲ್ಲದ ನ್ಯಾಯಾಧೀಶರಿಗಿಂತ ಹೆಚ್ಚಿನ ಶಕ್ತಿಯನ್ನು ಹೊಂದಿರುತ್ತಾರೆ.

ಆದರೆ ಇದು ಈ ವಿಷಯಕ್ಕೆ ಸಂಬಂಧಿಸಿದ ಸಂಕೀರ್ಣತೆಗಳ ಪ್ರಾರಂಭ ಮಾತ್ರವಾಗಿದೆ. ಪ್ರತಿನಿಧಿಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಆಯ್ಕೆಯ ಸ್ವಾಯತ್ತತೆಯ ಕೇಂದ್ರಗಳೆಂದೋ ಅಥವಾ ಪೂರ್ವನಿರ್ಧರಿತ ಲಿಪಿ ಮತ್ತು ಪಾತ್ರಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿರುವವರೆಂದೋ? (ಇದನ್ನು ಕೆಲವೊಮ್ಮೆ "ವ್ಯವಸ್ಥೆ/ ಸ್ವಾಯತ್ತತೆ" ಸಮಸ್ಯೆ ಎಂದು ಕರೆಯಲಾಗುತ್ತದೆ.) ಶಕ್ತಿಯುತರು ವ್ಯಕ್ತಿಗಳಾಗಿರಬೇಕೆ ಅಥವಾ ಸಮೂಹಗಳೂ (ಗುಂಪುಗಳು? ವರ್ಗಗಳು? ಸಂಘಟನೆಗಳು? ರಾಜ್ಯಗಳು) ಆಗಬಹುದೇ? ಮತ್ತು ಹಾಗಿದ್ದರೆ, ಅದು ಯಾವ ಸಂದರ್ಭಗಳಲ್ಲಿರಬೇಕು? ಹಾಗೂ ಅವರ ಅಧಿಕಾರವು ಹೆಚ್ಚು ಪರಿಣಾಮಕಾರಿಯಾಗಿ ಇರಬೇಕಾದರೆ, ಅಧಿಕಾರ ಹೊಂದಿರುವವರು ಅದನ್ನು ಉದ್ದೇಶಪೂರ್ವಕವಾಗಿ ಚಲಾಯಿಸ ಬೇಕೆ? ಅಧಿಕಾರವನ್ನು ವಾಸ್ತವಿಕಗೊಳಿಸಿದಾಗ ಅದು "ಉದ್ದೇಶಿತ ಪರಿಣಾಮಗಳನ್ನು ಬೀರುತ್ತದೆಯೇ", ಅಥವಾ ಶಕ್ತಿಯುತರು ನಿರ್ಧರಿಸದೆ, ವಾಡಿಕೆಯಂತೆ ನಿರೀಕ್ಷಿಸಲಾಗದ ರೀತಿಯಲ್ಲಿ ಕಾರ್ಯ ನಿರ್ವಹಿಸಬಹುದೇ? ಎಂದು ಬರ್ಟ್ರಂಡ್ ರಸೆಲ್ (Betrand Russell) ಮತ್ತು ಇತರ ಅನೇಕರು ಯೋಚಿಸಿದರು ಮತ್ತು ಯೋಚಿಸುವುದನ್ನು ಮುಂದುವರಿಸಿದರು. ಹಾಗೂ ನನ್ನ ಅಧಿಕಾರವನ್ನು ವಾಸ್ತವಿಕಗೊಳಿಸುವುದಕ್ಕಾಗಿ, ಜಗತ್ತಿನಲ್ಲಿ ಧನಾತ್ಮಕವಾಗಿ ತೊಡಗಿಸಿಕೊಳ್ಳುವುದರ ಮೂಲಕ ನಾನು ಕಾರ್ಯನಿರ್ವಹಿಸಬೇಕೇ? ನಾನು ನಿಷ್ಕ್ರಿಯನಾಗಿರುವುದರಲ್ಲಿ ಅಧಿಕಾರವಿದೆಯೇ? ಸಿ. ರೈಟ್ ಮಿಲ್ಸ್ ಅವರ 'ದಿ ಪವರ್ ಎಲೀಟ್' (C.Wright Mills in *The Power Elite*) ನಲ್ಲಿ "ಅಧಿಕಾರವಿರುವ ವ್ಯಕ್ತಿ" ಗಳನ್ನು ಅವರು ಮಾಡದಿರುವ ನಿರ್ಧಾರಗಳಿಗೆ ಉತ್ತರದಾಯಿತ್ವರನ್ನಾಗಿ ಮಾಡಲು ಬಯಸಿದರು. ಮತ್ತು ನಾನು ಕಾರ್ಯನಿರ್ವಹಿಸದಯೇ, ನನ್ನ ಬೆರಳನ್ನು ಮೇಲೆ ಎತ್ತುವ ಅಗತ್ಯವಿಲ್ಲದೆ ಇತರರು ನನ್ನ ಪರವಾಗಿ ಅಥವಾ ನನ್ನ ಹಿತಾಸಕ್ತಿಗಳನ್ನು ಮುಂದುವರಿಸಿದರೆ ಅದು ಸಹ ಅಧಿಕಾರವೆಂದು ಪರಿಗಣಿಸಲಾಗುವುದೇ?

ಈ ರೀತಿಯ ಕೆಲವು ಸಂಕೀರ್ಣತೆಗಳು (ಬಹಳಷ್ಟು ಇವೆ) ಅಧಿಕಾರವನ್ನು ನೋಡುವ ರೀತಿಯು ಅತ್ಯಂತ ಸಂಕುಚಿತವಾಗಿಯು ಮತ್ತು ವಿಶಾಲವಾಗಿಯೂ ಇದೆ ಎಂದು ತೋರಿಸಿಕೊಡುತ್ತವೆ. ಸಂಕುಚಿತವಾದ, ವೈಯಕ್ತಿಕವಾದ, ಉದ್ದೇಶಪೂರ್ವಕವಾದ ಮತ್ತು ಸಕ್ರಿಯವಾದ ದೃಷ್ಟಿಕೋನದಲ್ಲಿ ಅಧಿಕಾರವನ್ನು ನೋಡುವುದಾದರೆ, ಯಾರು ಉದ್ದೇಶಪೂರ್ವಕವಾಗಿ ಮತ್ತು ಅವರು ಬಯಸಿದರೆ ತಮ್ಮ ಹಿತಾಸಕ್ತಿಗಳನ್ನು ಧನಾತ್ಮಕ ಕ್ರಿಯೆಗಳಿಂದ ಮುಂದೂಡಲು ಸಮರ್ಥರಿರುತ್ತಾರೋ, ಅವರನ್ನು ಶಕ್ತಿಯುತರು ಎಂದು ಪರಿಗಣಿಸಲಾಗುತ್ತದೆ: ಉದಾಹರಣೆಗೆ ನಗರ ಮಂಡಳಿಯ ಒಕ್ಕೂಟ ಆಡಳಿತ ವ್ಯವಸ್ಥೆಯಲ್ಲಿ ನಿರ್ಣಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಗೆಲವನ್ನು ಸಾಧಿಸುವುದು. ವಿಶಾಲವಾದ ದೃಷ್ಟಿಯಲ್ಲಿ ಹೇಳುವುದಾದರೆ ಹೆಚ್ಚು ಶಕ್ತಿಯುತರು ವ್ಯಕ್ತಿಗಳು ಅಥವಾ ಸಮೂಹಗಳಾಗಿದ್ದು, ಅವರು ಅಂತಹ ಪರಿಣಾಮಗಳನ್ನು ಬಯಸುತ್ತಾರೋ ಅಥವಾ ಇಲ್ಲವೋ, ಕ್ರಮ ತೆಗೆದುಕೊಳ್ಳುವ ಅಥವಾ ತೆಗೆದುಕೊಳ್ಳದಿರುವ ಮೂಲಕ ತಮ್ಮ ಆಸಕ್ತಿಗಳನ್ನು ಮುಂದುವರೆಸಬಹುದು. ಉದಾಹರಣೆಗೆ, ಉನ್ನತ ಸವಲತ್ತು ವರ್ಗದ ಸದಸ್ಯರು ಇತರರ ಗೌರವ ಮತ್ತು ಸೀಮಿತ ಪದರುಗಳ ಸ್ವೀಕಾರ ಅವರ ವಿಶೇಷ ಸವಲತ್ತುಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿಸುತ್ತದೆ ಎಂಬುದರ ಅರಿವು ಅವರಿಗಿಲ್ಲದಿರುವ ಹಾಗೆ. ಹಿಂದಿನ ದೃಷ್ಟಿಕೋನದಲ್ಲಿ, ಗಣ್ಯರ ಅಧಿಕಾರವು ಅದರ ಸುಸಂಘಟಿತ ನೀತಿಯ ಗುರಿಗಳನ್ನು ಸಾಧಿಸುವ ಸಾಮರ್ಥ್ಯಕ್ಕೆ ಸೀಮಿತವಾಗಿದೆ; ನಂತರದ ದೃಷ್ಟಿಕೋನದಲ್ಲಿ, ಅದರ ಅಧಿಕಾರವು (ಮತ್ತು ಅದರ ಹಿತಾಸಕ್ತಿಗಳೆಂದು ಯಾವುದು ಪರಿಗಣಿಸಲಾಗುವುದೊ) ವಿಶಾಲ ಮತ್ತು ಆಳವಾದ ರೀತಿಯಲ್ಲಿ ವಿಸ್ತರಣೆಯಾಗುತ್ತದೆ. ನಾನು ಈ ಮೊದಲೇ ಹೇಳಿದಂತೆ,

ಅಧಿಕಾರ ಎಂಬ ವಿಷಯಕ್ಕೆ ಸಂಬಂಧಿಸಿದ ಈ ವಿಭಿನ್ನ ದೃಷ್ಟಿಕೋನಗಳು ಬಹಳ ಮುಖ್ಯವಾದದ್ದು: ನಾವು ಅಧಿಕಾರವನ್ನು ವಿಶಾಲವಾಗಿ ನೋಡದೆ ಸಂಕುಚಿತವಾಗಿ ನೋಡಿದರೆ ಅದನ್ನು ನೋಡುವ ಸಾಧ್ಯತೆಗಳು ನಮಗೆ ಕಡಿಮೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಇಲ್ಲಿಯವರೆಗೆ ನಾವು ಅಧಿಕಾರವನ್ನು ಅದರ ಅತ್ಯಂತ ಸಾಮಾನ್ಯ ಅರ್ಥದಲ್ಲಿ, ಋಣಾತ್ಮಕ ಅಥವಾ ಧನಾತ್ಮಕವಾಗಿ ಒಬ್ಬರ ಹಿತಾಸಕ್ತಿಗಳನ್ನು ಮುನ್ನಡೆಸುವ ಮತ್ತು ಇತರರ ಹಿತಾಸಕ್ತಿಗಳನ್ನು ಪ್ರಭಾವಿಸುವ ಸಾಮರ್ಥ್ಯ ಎಂದು ಪರಿಗಣಿಸಿದ್ದೇವೆ. ಆದರೆ ಈ ಕೊನೆಯ ಅಂಶಕ್ಕೆ ನಾವು ಹೆಚ್ಚು ಒತ್ತು ನೀಡುವುದು ಅತ್ಯಂತ ಮುಖ್ಯವಾಗಿದೆ, ಏಕೆಂದರೆ ಅಧಿಕಾರಕ್ಕೆ ಸಂಬಂಧಿಸಿದ ವ್ಯಾಖ್ಯಾನದ ಪ್ರಕಾರ, ಯಾರು ಹೆಚ್ಚು ಬಲಶಾಲಿಯಾಗಿರುತ್ತಾರೋ ಅವರ ಅಧಿಕಾರವು ಇತರರ ಹಿತಾಸಕ್ತಿಗಳನ್ನು ಪ್ರತಿಕೂಲವಾಗಿ ಪ್ರಭಾವಿಸುತ್ತದೆ ಎಂದು ತಪ್ಪಾಗಿ ಊಹಿಸಲಾಗಿದೆ. ಆದರೆ ಅಧಿಕಾರವು ಇತರರ ಸಂಪನ್ಮೂಲಗಳನ್ನು, ಸಾಮರ್ಥ್ಯಗಳನ್ನು ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸುವುದರ ಜೊತೆಗೆ, ಅವರನ್ನು ಸಬಲೀಕರಣಗೊಳಿಸುವ, ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿದೆ. ಉದಾಹರಣೆಗಳೆಂದರೆ, ಶಿಷ್ಯವೃತ್ತಿ, ಬೋಧನೆ, ಪಾಲನೆ, ಮತ್ತು ಚಿಕಿತ್ಸೆಯಂತಹ ಸಂಬಂಧಗಳನ್ನು ಪೋಷಿಸುವುದು. ನಿರಂಕುಶಾಧಿಕಾರದ ಸಾಕ್ರಟೀಸ್ (Socrates), ಆತ್ಮಜ್ಞಾನವನ್ನು ಪಡೆಯುವ ಸಾಧ್ಯತೆಗೆ ಅಣುವು ಮಾಡಿಕೊಡಲೆಂದು, ತನ್ನ ಯುವ ಸಂವಾದಕರಲ್ಲಿ ಅತಿ ದೊಡ್ಡ ಗೊಂದಲವನ್ನು ಸೃಷ್ಟಿಸಿದರು ಎಂಬ ಪ್ಲೇಟೊವಿನ (Plato) ಆಖ್ಯಾನವನ್ನು ಪರಿಗಣಿಸಿರಿ. ಸೇನೆಗಳು, ವಾದ್ಯವೃಂದಗಳು, ಮತ್ತು ಕ್ರೀಡೆಗಳಂತಹ ಮೌಲ್ಯಯುತ ಮತ್ತು ಸಹಕಾರಿ ಚಟುವಟಿಕೆಗಳಿಗೆ ಅನಿವಾರ್ಯವಾಗಿರುವ ಆಜ್ಞೆ–ವಿಧೇಯತೆ ಸಂಬಂಧಗಳು ಇತರ ಉದಾಹರಣೆಗಳಾಗಿವೆ.

ಅಧಿಕಾರವನ್ನು, ದೈನಂದಿನ ಮತ್ತು ಶೈಕ್ಷಣಿಕ ಬಳಕೆಯಲ್ಲಿ ಮತ್ತು ಹೆಚ್ಚು ನಿರ್ಬಂಧಿತ ಅರ್ಥದಲ್ಲಿ, ಒಬ್ಬರ ಅಥವಾ ಇತರರ ಮೇಲೆ ಅಧಿಕಾರ ಚಲಾಯಿಸುವ ಅಸಮ ಸಂಬಂಧಗಳೆಂದು ಸಾಮಾನ್ಯವಾಗಿ ಅರ್ಥೈಸಲಾಗುವುದರಿಂದ ಈ ತಪ್ಪು ಗ್ರಹಿಕೆಗೆ ಕಾರಣವಾಗಿದೆ. ಅಧಿಕಾರದ ಬಗ್ಗೆ ಇರುವ ಈ ವ್ಯಾಪಕ ತಿಳಿವಳಿಕೆಯು ಸಹಜವಾಗಿ ಅಧೀನ, ಅವಲಂಬನೆ ಮತ್ತು ನಿಯಂತ್ರಣದ ಪರಿಕಲ್ಪನೆಗಳನ್ನು ಒಳಗೊಂಡಿದೆ. ಸ್ಪಿನೋಝಾ (Spinoza) ಇದನ್ನು, ಒಬ್ಬ ವ್ಯಕ್ತಿಯು ಇನ್ನೊಬ್ಬರ ಅಧಿಕಾರ ವಶದಲ್ಲಿದ್ದು "ತನ್ನದೇ ಆದ ಸ್ವಭಾವ ಮತ್ತು ವಿವೇಚನೆಯು ಆದೇಶಿಸಿದಂತೆ" ಜೀವಿಸುವುದನ್ನು ತಡೆಯುವ ಪರಿಕಲ್ಪನೆಯನ್ನು ಸೆರೆಹಿಡಿಯಲು, ಪೊಟೆಸ್ಟಾಸ್ (*potestas*) ಎಂದು ಕರೆಯುತ್ತಾನೆ. ಆದಾಗ್ಯೂ, ಅಂತಹ ಸಮರೂಪತೆ ಇಲ್ಲದ (ಅಸಮರೂಪದ) ಅಧಿಕಾರದ ಅಸಂಖ್ಯಾತ ಉದಾಹರಣೆಗಳು "ಧನಾತ್ಮಕ" ಅಥವಾ ಪ್ರಯೋಜನಕಾರವಾಗಿವೆ ಎಂಬುದನ್ನು ಈ ಹಿಂದಿನ ಪ್ಯಾರ ಸೂಚಿಸುತ್ತದೆ. ಬಹುಶಃ ಸಮರೂಪತೆ ಇಲ್ಲದ ಅಧಿಕಾರ ಅಥವಾ ಇತರರ ಮೇಲಿನ ಅಧಿಕಾರವನ್ನು ನಕರಾತ್ಮಕವಾಗಿ ನೋಡುವಂತಹ ಪ್ರವೃತ್ತಿಯು (ಅಂತಹ ಸಂದರ್ಭಗಳನ್ನು ನಿರ್ಲಕ್ಷಿಸುವುದು) ಅವಲಂಬಿತ ಸಂಬಂಧಗಳ ಬಗ್ಗೆ ಅಸಹನೀಯತೆ ಮತ್ತು ಅಂತರ್ಗತವಾಗಿ ಸಾಮಾಜಿಕ ಕ್ರಮವು ಸಂಘರ್ಷದಿಂದ ಕೂಡಿದೆ ಎಂಬ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ಹುಟ್ಟಿಕೊಂಡಿದೆ ಎಂದು ಕಾಣುತ್ತದೆ.

ಹಾಗಾಗಿ, ಅಧಿಕಾರದ ಸಂಬಂಧಗಳನ್ನು ಪ್ರಾಬಲ್ಯದ ಚೌಕಟ್ಟಿನಲ್ಲಿ ಸಾಮಾನ್ಯವಾಗಿ ಅರ್ಥೈಸಲಾಗಿದೆ, ಮತ್ತು ಈ ಪ್ರಬಂಧದ ಉಳಿದ ಭಾಗವು ಹೆಚ್ಚು ಈ ನಿರ್ಬಂಧಿತ ಅರ್ಥೈಸುವಿಕೆಯ ಕಡೆ ಗಮನವನ್ನು ಕೇಂದ್ರೀಕರಿಸುತ್ತವೆ. ಅಧಿಕಾರವನ್ನು

ಪ್ರಾಬಲ್ಯವೆಂದು ನಾವು ಹೇಗೆ ಅರ್ಥೈಸಿಕೊಳ್ಳ ಬೇಕು: ಕೆಲವರು ಇತರರ ಮೇಲೆ ಚಲಾಯಿಸುವ ಅಧಿಕಾರವೆಂದು ಮತ್ತು ಅದಕ್ಕೆ ಒಳಪಟ್ಟವರ ಹಿತಾಸಕ್ತಿಯ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತದೆ ಎಂದೆ? ಎಂಬ ಪ್ರಶ್ನೆ ಎದುರಾಗುತ್ತದೆ. ಕೆಲವೊಮ್ಮೆ, ಆಂಗ್ಲೋ ಅಮೇರಿಕನ್ ರಾಜಕೀಯ ವಿಜ್ಞಾನಿಗಳ ನಡುವೆ ನಡೆದ "ಅಧಿಕಾರದ ಬಗೆಗಿನ ಚರ್ಚೆ" ಎಂದು ಕರೆಯಲ್ಪಡುವ ಈ ಚರ್ಚೆಯು ಈ ಪ್ರಶ್ನೆಯ ಮೇಲೆ ಅವಲಂಬಿತವಾಗಿತ್ತು. 1958 ರಲ್ಲಿ ರಾಬರ್ಟ್ ಡಾಲ್ (Robert Dahl) ಎಂಬುವರು ಪ್ರಾರಂಭಿಸಿದ ಚರ್ಚೆಯಲ್ಲಿ ಅವರು ಇದನ್ನು "ಅಡಳಿತ ಗಣ್ಯರ ಮಾದರಿ" ಎಂದು ಟೀಕಿಸಿದ್ದಾರೆ (ಈ ಚರ್ಚೆಯನ್ನು ಫ್ಲಾಯ್ಡ್ ಹಂಟರ್ ಮತ್ತು ಸಿ. ರೈಟ್ ಮಿಲ್ಸ್ {Flyod Hunter and C.Wright Mills}ಮುಂದುವರಿಸಿದರು). ಮೇಲಿನ ಪ್ರಶ್ನೆಗೆ ಸಂಬಂಧಿಸಿದಂತೆ ಚರ್ಚೆಯ ಒಂದು ಭಾಗವು ಅಧಿಕಾರವನ್ನು ಸಂಕುಚಿತವಾಗಿ ಅಥವಾ ವಿಶಾಲವಾಗಿ ಪರಿಕಲ್ಪಿಸಬೇಕೆ ಎನ್ನುವದರ ಮೇಲೆ ತನ್ನ ಗಮನವನ್ನು ಹರಿಸಿತ್ತು. ಆದರೆ ಪ್ರಶ್ನೆಯು ಅದಕ್ಕಿಂತ ಹೆಚ್ಚು ಸಂದಿಗ್ಧವಾಗಿತ್ತು.

ಆಳ್ವಿಕೆಯ ಗಣ್ಯ ವ್ಯಕ್ತಿಗಳಿಗೆ ಅಥವಾ ಆಡಳಿತ ವರ್ಗಕ್ಕೆ ಪ್ರಾಯೋಗಿಕ ಸಾಕ್ಷ್ಯಗಳ ಕೊರತೆ ಇದೆ ಎಂಬುದು ಡಾಲ್ ಅವರ ಆಕ್ಷೇಪಣೆ ಆಗಿತ್ತು, ಹೀಗಾಗಿ ಅವರು ಅಧಿಕಾರವನ್ನು ಅಧ್ಯಯನ ಮಾಡುವ ಒಂದು ಹೊಸ ವಿಧಾನವನ್ನು ಪ್ರಸ್ತಾಪಿಸಿದರು. ಅದು, ಆಸಕ್ತಿಗಳನ್ನು ಆದ್ಯತೆಗಳನ್ನಾಗಿ ಪರಿಗಣಿಸಿ, ರಾಜಕೀಯ ಭಾಗವಹಿಸುವಿಕೆಯಲ್ಲಿ ಕಂಡುಬರುವಂತೆ ಮತ್ತು ಪ್ರಮುಖ ನಿರ್ಧಾರಗಳಲ್ಲಿ ಅಥವಾ ಗಮನಿಸಬಹುದಾದ ಘರ್ಷಣೆಯಲ್ಲಿ ಒಂದು ಗುಂಪಿನ ಆದ್ಯತೆಗಳು ಇತರ ಗುಂಪುಗಳ ಆದ್ಯತೆಗಳ ಮೇಲೆ ನಿಯಮಿತವಾಗಿ ಮೇಲುಗೈ ಸಾಧಿಸುವುದನ್ನು ಪರಿಮಾಣಿಸುವುದರ ಮೂಲಕ ಅಧಿಕಾರವನ್ನು ಮಾಪನ ಮಾಡುತ್ತದೆ ಎಂದು ವ್ಯಾಖ್ಯಾನಿಸಿತು. ಅಧಿಕಾರದ ಈ ಪರಿಕಲ್ಪನೆಯು ಸ್ಪಷ್ಟವಾಗಿ, ಸಂಕುಚಿತವಾದ ವ್ಯಕ್ತಿಗತ, ಉದ್ದೇಶಪೂರ್ವಕ ಮತ್ತು ಸಕ್ರಿಯವಾದ ದೃಷ್ಟಿಕೋನವನ್ನು ಹೊಂದಿತ್ತು. ಅಮೇರಿಕಾದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ವಿಭಿನ್ನ ವ್ಯಕ್ತಿಗಳು ವಿಭಿನ್ನ ಪ್ರಮುಖ ವಿಷಯಗಳ ಮೇಲೆ ಮೇಲುಗೈ ಸಾಧಿಸುವುದರಿಂದ ಅಮೇರಿಕಾದ ನಗರಗಳು ಮತ್ತು ಅಮೇರಿಕಾದ ರಾಜನೀತಿಗಳು ರಾಷ್ಟ್ರೀಯವಾಗಿ "ಬಹುತ್ವವಾದದ್ದು" ಎಂದು ಡಾಲ್ ಮತ್ತು ಅವರ ಸಹೋದ್ಯೋಗಿಗಳು ತೀರ್ಮಾನಿಸಿದರ ಪರಿಣಾಮವಾಗಿ, ಈ ಗಣ್ಯ ಮಾದರಿಯು ನಿರಾಕರಿಸಲ್ಪಟ್ಟಿತು.

ಅವರ ಈ ದೃಷ್ಟಿಕೋನವು ಅಧಿಕಾರದ "ಇನ್ನೊಂದು ಮುಖ" ವನ್ನು ನಿರ್ಲಕ್ಷಿಸಿದೆ ಎಂದು ರಾಜಕೀಯ ವಿಜ್ಞಾನಿಗಳಾದ ಪೀಟರ್ ಬಚ್ರಾಚ್ ಮತ್ತು ಮೊರ್ಟನ್ ಬರಾಟ್ಜ್ (Peter Bachrach and Morton Baratz)ರವರು ಟೀಕಿಸಿದರು. ಅವುಗಳೆಂದರೆ, ರಾಜಕೀಯ ಉದ್ದೇಶಗಳನ್ನು ರೂಪಿಸುವ ಅಧಿಕಾರ: ಪ್ರಮುಖ ರಾಜಕೀಯ ವಿಷಯಗಳೆಂದು ನಿರ್ಣಯಿಸುವುದರ ಮೂಲಕ ಸಂಭಾವ್ಯ ವಿಷಯಗಳನ್ನು ವಾಸ್ತವಕ್ಕೆ ಪರಿವರ್ತಿಸದಿರುವ ಅಧಿಕಾರ: ಅಸ್ತಿತ್ವದಲ್ಲಿರುವ ಕುಂದು ಕೊರತೆಗಳನ್ನು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸದಂತೆ ತಡೆಗಟ್ಟುವುದು ಮತ್ತು "ನಿರ್ಣಯ ಮಾಡದಿರುವಿಕೆ" ಯ ಮೂಲಕ ವಿವಿಧ ರೀತಿಗಳಲ್ಲಿ (ಅವುಗಳೆಂದರೆ, ಸಂಭಾವ್ಯ ವಿರೋಧಿಗಳಿಗೆ ಸಹಕರಿಸುವುದು ಮತ್ತು ಮತದಾನದ ನಿಯಮಗಳನ್ನು ದುರುಪಯೋಗ ಮಾಡುವುದು) "ಪಕ್ಷಪಾತದ ಸಜ್ಜುಗೊಳಿಸುವಿಕೆಗೆ" ನೆರವಾಗುವುದು. ಅವರ ಈ ದೃಷ್ಟಿಕೋನವು ಉದ್ದೇಶಪೂರ್ವಕವಾಗಿ ಮತ್ತು ಸಕ್ರಿಯವಾಗಿಯೇ ಉಳಿದುಕೊಂಡಿತು: ನಿರ್ಣಯ ಮಾಡದಿರುವಿಕೆ ಕೂಡ ಉದ್ದೇಶಪೂರ್ವಕವಾಗಿಯೇ ಉಳಿಯಿತು ಮತ್ತು ಅದು ಗೌಪ್ಯವಾಗಿರುವ ಕುಂದುಕೊರತೆಗಳ ಹೊರತಾಗಿಯೂ ಗಮನಿಸಬಹುದಾದಂತಹವುಗಳನ್ನು ನಿಗ್ರಹಿಸುವಲ್ಲಿ ಒಳಗೊಂಡಿರಬೇಕು ಎಂದು ಸ್ಪಷ್ಟಪಡಿಸಿತು. ಗಣ್ಯರೆಂದು ಭಾವಿಸಲಾದವರ ಆದ್ಯತೆ ಮತ್ತು ಹೊರಗಿಡಲಾದವರ

ಕುಂದುಕೊರತೆಗಳ ನಡುವೆ ಆದ್ಯತೆಯು ಅಸ್ತಿತ್ವದಲ್ಲಿದೆ ಎಂದು ಊಹಿಸಿವುದರಿಂದ ಗಮನಿಸಬಹುದಾದ (ಬಹಿರಂಗವಾಗಿ ಇಲ್ಲದಿದ್ದರೂ) ಆಸಕ್ತಿಗಳ ಸಂಘರ್ಷವು ಕಾಣಬಹುದು ಎಂದು ಅವರು ಆಖ್ಯಾನಿಸಿದರು.

1974ರಲ್ಲಿ ನಾನು ಅಧಿಕಾರದ ಮೂರನೇ ಆಯಾಮವನ್ನು ಪ್ರಸ್ತಾಪಿಸುವ ಮೂಲಕ ಈ ಅಭಿಪ್ರಾಯವನ್ನು ಟೀಕಿಸಿದೆ (ಮಾರ್ಕ್ಸ್‌ವಾದಿ ಸಂಪ್ರದಾಯದಿಂದ ಒಳನೋಟಗಳನ್ನು ಸಂಯೋಜಿಸಿ, ಅದು ಮುಖ್ಯವಾಗಿ ಗ್ರಾಮ್‌ಸ್ಕಿಯ ಪರಿಕಲ್ಪನೆಯಾದ "ಅಧಿಪತ್ಯದ" ಒಂದು ವ್ಯಾಖ್ಯಾನ). ಈ ಮೂರು ಆಯಾಮದ ದೃಷ್ಟಿಕೋನವು, ಮೊದಲ ಮತ್ತು ಎರಡನೆಯ ದೃಷ್ಟಿಕೋನಗಳನ್ನು ಅಂಗೀಕರಿಸುತ್ತಲೇ, ಅಧಿಕಾರವು ಆಶಯಗಳನ್ನು ಮತ್ತು ನಂಬಿಕೆಗಳನ್ನು ರೂಪಿಸುವುದರ ಮೂಲಕ ಪ್ರಬಲವಾದ ಅಧಿಕಾರದ ಸಂಬಂಧಗಳಿಗೆ ಒಪ್ಪಿಗೆ ಪಡೆದುಕೊಳ್ಳುವುದನ್ನು ಸಹ ಒಳಗೊಳ್ಳಬಹುದು ಎಂದು ಪ್ರಸ್ತಾಪಿಸಿದೆ. ಇದು ಸಂಭವಿಸುವ ಮಟ್ಟಿಗೆ, ಗಮನಿಸಬಹುದಾದ (ಗೌಪ್ಯವಾಗಿದ್ದರೂ ಸಹ) ಸಂಘರ್ಷ ಕಣ್ಮರೆಯಾಗಬಹುದು ಹಾಗೂ ಒಳಗೊಳ್ಳುವ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳು ಇನ್ನು ಮುಂದೆ ಉದ್ದೇಶಪೂರ್ವಕವಾಗಿ ಮತ್ತು ಸಕ್ರಿಯವಾಗಿರಬೇಕಾಗಿಲ್ಲ. ಆದರೂ ಅಧಿಕಾರವೆಂದು ಆರೋಪಿಸ ಬೇಕಾದರೆ ಅವುಗಳು ಇನ್ನೂ ನಿರ್ದಿಷ್ಟವಾಗಿರಬೇಕು. ಈ ವಿವರಣೆಯ ಪ್ರಕಾರ ಮೂರನೇ ಆಯಾಮವು ಅಧಿಕಾರದ ವಶಕ್ಕೆ ಒಳಪಟ್ಟಿರುವವರ ಆದ್ಯತೆ ಅಥವಾ ಕುಂದುಕೊರತೆಗಳಿಗೆ ಅದು ಹಾನಿಕರವಲ್ಲ. ಏಕೆಂದರೆ, ಇದು ಆದ್ಯತೆಗಳನ್ನು ಆಕಾರಗೊಳಿಸಲು ಮತ್ತು ಕುಂದುಕೊರತೆಗಳನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ. ಹೀಗಾಗಿ ನಾವು ಅದನ್ನು "ನೈಜ ಹಿತಾಸಕ್ತಿ"ಗಳ ವಿರುದ್ಧ ಕಾರ್ಯನಿರ್ವಹಿಸುವಂತೆ ನಿರೂಪಿಸಬಹುದು.

ಆದರೆ, ಈ ಉದ್ರೇಕಕಾರಿ ಸಲಹೆಯು ದುರಹಂಕಾರ ಮತ್ತು ದೊಡ್ಡಸ್ತಿಕೆಯ ಮನೋವೃತ್ತಿಯನ್ನು ಒಳಗೊಂಡಿದೆ ಎನ್ನುವ ಕಾರಣದಿಂದಾಗಿ ಅನೇಕ ಟೀಕೆಗಳಿಗೆ ಗುರಿ ಆಯಿತು. ಅಂತಹ ಟೀಕೆಗಳಿಗೆ ಒಂದು ಪ್ರತ್ಯುತ್ತರವೆಂದರೆ, ಈ ಸಾಧ್ಯತೆಯನ್ನು ಅನುಮತಿಸದ ಅಧಿಕಾರದ ಯಾವುದೇ ದೃಷ್ಟಿಕೋನವು ನಾವೆಲ್ಲರೂ ಗುರುತಿಸಬಹುದಾದ ಸಾಧ್ಯತೆ ಮತ್ತು ವ್ಯಾಪಕವಾದ ವಾಸ್ತವತೆಗೆ (ಆ ಗುರುತಿಸುವಿಕೆಯನ್ನು ಸಮರ್ಥಿಸಿಕೊಳ್ಳಲು ಎಷ್ಟೇ ಅಹಿತಕರವಾಗಿದ್ದರೂ ಸಹ) ಕಾರಣಗಳನ್ನು ನೀಡುವುದರಲ್ಲಿ ವಿಫಲವಾಗುತ್ತದೆ.

ಸಮ್ಮತಿಸುವ ಜನರಿಂದ ತಮ್ಮ ಪ್ರಭುತ್ವಕ್ಕೆ ಒಪಪಿಗೆಯನ್ನು ಪಡೆದುಕೊಳ್ಳುವ ಅಧಿಕಾರದ ಮೂರನೇ ಆಯಾಮವು ಅಸ್ತಿತ್ವದಲ್ಲಿಲ್ಲ ಅಥವಾ ಅಪರೂಪ ಎನ್ನುವ ಮತ್ತೊಂದು ಟೀಕೆಯನ್ನು ಜೇಮ್ ಸ್ಕಾಟ್ ರವರು ತಮ್ಮ *Domination and the Arts of Resistance* (ಡಾಮಿನೇಷನ್ ಅಂಡ್ ಧಿ ಆರ್ಟ್ಸ್ ಆಫ್ ರೆಸಿಸ್ಟೆನ್ಸ್ = ಪ್ರಭುತ್ವ ಮತ್ತು ಪ್ರತಿರೋಧದ ಕಲೆ) ನಲ್ಲಿ ಸುದೀರ್ಘವಾಗಿ ಮುಂದುವರಿಸಿದರು. ಜೇಮ್ಸ್ ಸ್ಕಾಟ್‌ರವರ ವಿವರಣೆಯ ಪ್ರಕಾರ ಪ್ರಭುತ್ವದ ಬಲಿಪಶುಗಳು ಅಥವಾ ಸಂತ್ರಸ್ತರು ನಿರಂತರ ಬಂಡಾಯದ ಸ್ಥಿತಿಯಲ್ಲಿದ್ದಾರೆ ಮತ್ತು ಬದುಕುಳಿಯಲು ಅವರು ಏನೂ ಗೊತ್ತಿಲ್ಲದವರಂತೆ ನಟಿಸುತ್ತಾರೆ ಎಂದು ಹೇಳುತ್ತಾರೆ. ಜೇಮ್ಸ್ ಸ್ಕಾಟ್‌ರವರ ಪುಸ್ತಕವು ಚಾತುರ್ಯದ, ಯಾವಾಗಲೂ ಜಾಗೃತವಾಗಿರುವ ಗುಲಾಮರು, ರೈತರು ಮತ್ತು ಅಸ್ಪೃಶ್ಯರ ಕುಶಲತೆ ಮತ್ತು ಕಾರ್ಯತಂತ್ರಗಳ ಬಗ್ಗೆ ಬಲವಾದ ವಿವರಣೆಯನ್ನು ನೀಡುತ್ತದೆ. ಆದರೆ ಹೆಚ್ಚು ದಬ್ಬಾಳಿಕೆಯ ವಾತಾವರಣದಲ್ಲಿ ಜನಾಂಗೀಯಶಾಸ್ತ್ರವಾಗಿ (as ethnography) ಮನಗಾಣಿಸಿದರೂ, ಜೇಮ್ಸ್ ಸ್ಕಾಟ್ ಸಮರ್ಥಿಸಿದಂತೆ, "ಅಧೀನ ಮತ್ತು ದಿಟ ಪ್ರಜ್ಞೆಯ ವಿಮರ್ಶೆಯನ್ನು" ಒದಗಿಸುವ ಇದು ನಿಶ್ಚಲತೆಯ ವ್ಯಾಖ್ಯಾನವನ್ನು ನೀಡುವುದಿಲ್ಲ. ಮತ್ತು, ಪೂರ್ವ ಆಧುನಿಕ ಮತ್ತು ಆಧುನಿಕ ಸಮಾಜ – ಇವೆರಡರಲ್ಲೂ ಕೂಡ ವ್ಯಾಪಕವಾದ ಒಪ್ಪಿಗೆ ಮತ್ತು ಪ್ರತಿರೋಧ ಇಲ್ಲವೆಂದು

ತೋರಿಸುವ ಮತ್ತು ಆಧಿಪತ್ಯದ ಅಧಿಕಾರ ಸಂಬಂಧಗಳಿಂದ ಸಂಭವಿಸಿ ಅಭಿವ್ಯಕ್ತವಾಗುತ್ತದೆ ಎಂಬುದನ್ನು ವಿವರಿಸುವಲ್ಲಿ ಈ ಗ್ರಂಥವು ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

"ಅಮೂಲಾಗ್ರ" ಎಂದು ತನ್ನ ಲೇಖಕರಿಂದ ವಿವರಿಸಲ್ಪಟ್ಟ ಅಧಿಕಾರದ ಮೂರು-ಆಯಾಮದ ದೃಷ್ಟಿಕೋನವು, ಅಧಿಕಾರವು ಗಮನಿಸಬಹುದಾದ ಸಂಘರ್ಷದ ಅನುಪಸ್ಥಿತಿಯಲ್ಲಿ ಅಪೇಕ್ಷೆ ಮತ್ತು ನಂಬಿಕೆಗಳನ್ನು ಸೃಷ್ಟಿಸುವುದರಿಂದ, ಕನಿಷ್ಟ ವೀಕ್ಷಿಸಬಹುದಾದ ಸಂದರ್ಭದಲ್ಲಿ ಅದು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ ಎಂದು ವಿರೋಧಾಭಾಸದ ತೀರ್ಮಾನವನ್ನು ಸೂಚಿಸುತ್ತದೆ. ಇದರಿಂದ ಪ್ರಾಯೋಗಿಕ ಸಾಮಾಜಿಕ ವಿಜ್ಞಾನಕ್ಕೆ ಗಣನೀಯ ಪ್ರಮಾಣದ ಸವಾಲು ಎದುರಾಗುತ್ತದೆ. ಈ ಚಿಂತನೆಯನ್ನು ಅದರ ಅತಿಯಾದ ಅಮೂಲಾಗ್ರ ತೀವ್ರತೆಗೆ ತೆಗೆದುಕೊಂಡು ಹೋದ ವ್ಯಕ್ತಿ ಯಾರೆಂದರೆ, ಅಧಿಕಾರದ ಬಗ್ಗೆ ಬರೆದಿರುವ ಒಬ್ಬ ಪ್ರಮುಖ ಸಮಕಾಲೀನ ಲೇಖಕ ಮಿಶೆಲ್ ಫುಕೋ (Michel Foucault). ಅಧಿಕಾರದ ವಿಷಯದ ಮೇಲಿನ ಅವನ ಬರಹಗಳು ಅಪೇಕ್ಷೆ ಮತ್ತು ನಂಬಿಕೆಗಳು ಹೇಗೆ ಸೃಷ್ಟಿಗೊಳ್ಳುತ್ತದೆ ಎಂಬುದರ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ. ಮಿಶೆಲ್ ಫುಕೋರವರು ಅಧಿಕಾರದ ಸಕಾರಾತ್ಮಕ ಅಥವಾ ಸಶಕ್ತ ಪರಿಣಾಮಗಳನ್ನು ಸಹ ಗ್ರಹಿಸಿದರು, ಮತ್ತು ಅದನ್ನು ಅಂತರ್ಗತವಾಗಿ ದಮನಕಾರಿಯೆಂದು ನೋಡುವುದರ ಬಗ್ಗೆ ಎಚ್ಚರಿಕೆ ನೀಡಿದರು. ಅವರು, ಸಮಾಜಶಾಸ್ತ್ರಜ್ಞರು ಏನನ್ನು "ಸಾಮಾಜಿಕೀಕರಣ ಪ್ರಕ್ರಿಯೆಗಳು" ಎಂದು ಕರೆದರೊ ಮತ್ತು ಅದನ್ನು ಅನೇಕ ರೀತಿಯಲ್ಲಿ ಸೂಕ್ಷ್ಮವಾಗಿ ಮಾಲೀಕರು, ಆಡಳಿತ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು, ಪೋಷಕರು, ಶಿಕ್ಷಕರು, ವೈದ್ಯಕೀಯ ಸಿಬ್ಬಂದಿಗಳು, ಮತ್ತು ಎಲ್ಲಾ ರೀತಿಯ ತಜ್ಞರು ನಿರ್ವಹಿಸುವುದನ್ನು "ಅಧಿಕಾರದ ಸೂಕ್ಷ್ಮ ಭೌತಶಾಸ್ತ್ರ" ಎಂದು ಕರೆದು ಸಂಶೋಧಿಸಿದರು. ಅವರಿಂದ ಸ್ಫೂರ್ತಿ ಪಡೆದ ಕೆಲವರು, ಸ್ವಇಚ್ಛಾ ಅನುಸರಣೆಗಳಿಸುವ ಸೂಕ್ಷ್ಮ ಸ್ವರೂಪಗಳನ್ನು ಪರಿಶೋಧಿಸಿದ್ದಾರೆ. ಇದು ಜನರನ್ನು ವಿಶಾಲವಾದ ಪ್ರಮಾಣಕ ನಿಯಂತ್ರಣದ ಮಾದರಿಯೊಳಗೆ ಸೇರಿಸಿಕೊಳ್ಳುತ್ತದೆ, ಮತ್ತು ಅವರು ಅಧಿಕಾರದಿಂದ ಮುಕ್ತವಾಗಿದ್ದು – ಕೆಲವು ಬಾರಿ ತಪ್ಪಾಗಿ – ತಮ್ಮದೇ ಆದ ಆಯ್ಕೆಗಳನ್ನು ಮಾಡುತ್ತಿರುವವರೆಂದು, ತರ್ಕಬದ್ಧವಾಗಿ ವಾದಗಳನ್ನು ಮೌಲ್ಯಮಾಪನ ಮಾಡಿ ಅಂತಿಮವಾಗಿ ತಮ್ಮದೇ ಆದ ತೀರ್ಮಾನಕ್ಕೆ ಬಂದಿರುವವರೆಂಬ ನಂಬಿಕೆ, ಅವರನ್ನು ತಮ್ಮ ಸ್ವಂತ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುವ ಹಾಗೆ ಮಾಡುತ್ತದೆ ಎಂದು ಮಂಡಿಸಿದರು.

ಇನ್ನೂ ಮಿಶೆಲ್ ಫುಕೋ, ಅತ್ಯಂತ ಭಾವೋತ್ತೇಜನವಾಗಿ ಹೇಳಿದ್ದೇನೆಂದರೆ, ಅಧಿಕಾರದಿಂದ ಯಾವುದೇ ವಿಮೋಚನೆಯಿಲ್ಲ: ಅದು "ಸರ್ವತ್ರವಾಗಿದೆ ಮತ್ತು ಅದರ ಪರಿಣಾಮಗಳಿಂದ ಸ್ವತಂತ್ರವಾಗಿ ರೂಪುಗೊಳ್ಳುವ ಯಾವುದೇ ವ್ಯಕ್ತಿಗಳಿಲ್ಲ"; ಅದು "ಸತ್ಯದ ಪ್ರಭುತ್ವ" ಗಳನ್ನು ಹೇರುತ್ತದೆ; ಅದು "ವಿಧೇಯ ದೇಹಗಳನ್ನು/ ಪ್ರಜೆಗಳನ್ನು" ಸೃಷ್ಟಿಸುತ್ತದೆ. ಪಾಶ್ಚಾತ್ಯವು "ಪುರುಷರನ್ನು ಅಧೀನರನ್ನಾಗಿ ಮಾಡಿದೆ: ಪದದ ಎರಡೂ ಅರ್ಥಗಳಲ್ಲಿ ಅವರ ಸಂವಿಧಾನವನ್ನು ರಚಿಸಿದೆ". ಈ ವಿಪರೀತ ಸಮರ್ಥನೆಗಳು (ಅವುಗಳಲ್ಲಿ ಕೆಲವನ್ನು ನಂತರ ಅವರು ಹಿಂತೆಗೆದುಕೊಂಡರು) ನಾವು ಸ್ವಾತಂತ್ರ್ಯ ಮತ್ತು ವಿವೇಚನೆಯನ್ನು ಹೇಗೆ ಯೋಚಿಸುತ್ತೇವೆ ಎಂಬುದರ ಮೇಲೆ ವಿಧ್ವಂಸಕ ಪರಿಣಾಮಗಳನ್ನು ಹೊಂದಿವೆ: ನಾವೆಲ್ಲರೂ ಅಧಿಕಾರದಿಂದ "ರೂಪುಗೊಂಡ" ಅಧಿಕಾರದ ವಶಕ್ಕೆ "ಒಳಪಟ್ಟಿರುವ ವ್ಯಕ್ತಿಗಳು" ಎಂದು; ಆಧುನಿಕ ವ್ಯಕ್ತಿಯು ಅಧಿಕಾರದ

"ಪರಿಣಾಮ" ಎಂದು; ವಿಚಾರಪರತೆಯು ಅಧಿಕಾರದಿಂದ **"ಭೇದಿಸಲ್ಪಟ್ಟಿರುವುದರಿಂದ"**, ಅಧಿಕಾರವು ತರ್ಕಸಮ್ಮತದ ಒಪ್ಪಿಗೆಯ ಮೇಲೆ ಆಧಾರಿತವಾಗಿರಲು ಸಾಧ್ಯವಿಲ್ಲ; ಇತ್ಯಾದಿ. ಮತ್ತು, ನಾವು ಮಿಶೆಲ್ ಫುಕೋ ವನ್ನು ಅನುಸರಿಸಿದರೆ, ಅಧಿಕಾರವನ್ನು "ಎಲ್ಲೆಡೆಯೂ" ಅಸ್ತಿತ್ವದಲ್ಲಿರುವ ಮತ್ತು ಅದರ ಪ್ರಜೆಗಳನ್ನು "ರೂಪಿಸುತ್ತಿರುವುದಾಗಿ**"** ನೋಡಿದರೆ, ಸಾಮಾಜಿಕ ವಿಜ್ಞಾನ ಮತ್ತು ಪ್ರಾಯೋಗಿಕವಾಗಿ ಅಧಿಕಾರವನ್ನು ಅಧ್ಯಯನ ಮಾಡುವ ಯೋಜನೆಯನ್ನು ಕೈ ಬಿಡಬೇಕಾಗುತ್ತದೆ.

ಎರಡು ಪ್ರಮುಖ ವಿಶಾಲವಾದ ತೀರ್ಮಾನಗಳು ಇಲ್ಲಿ ಗೋಚರಿಸುತ್ತವೆ. ಅವುಗಳು ಈ ರೀತಿ ಇವೆ. ಮೊದಲಿಗೆ, ಅಧಿಕಾರ, ಶಕ್ತಿಶಾಲಿ ಮತ್ತು ಬಲಹೀನ ಎಂಬ ಪದಗಳ ಬಳಕೆಯು  ಹೆಚ್ಚು ಸ್ವಹಿತಾಸಕ್ತಿಯಿಂದ ಚಾಲಿತವಾಗಿದೆ, ಹಾಗೂ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಪ್ರತಿನಿಧಿಗಳ ಅಧಿಕಾರದ ಪ್ರಭಾವವನ್ನು ಗುರುತಿಸುವಲ್ಲಿ ಮತ್ತು ಮೌಲ್ಯಮಾಪನ ಮಾಡುವಲ್ಲಿ ನಾವು ಹಲವಾರು ಸುಸ್ಪಷ್ಟ ಆಸಕ್ತಿಗಳನ್ನು ಹೊಂದಿದ್ದೇವೆ. (ನಾವು ನಮ್ಮ ಪ್ರತಿನಿಧಿಗಳಿಗೆ ಅಧಿಕಾರವನ್ನು {ಅದು ಯಾವುದೇ ರೀತಿಯಲ್ಲಿ ಕಲ್ಪಿಸಿದ್ದರೂ} ಆರೋಪಿಸುತ್ತೇವೆ, ಆದರೆ ಇದು ಸಹ ಪ್ರತಿವಾದಿಸಲಾಗುವಂತದ್ದೆಂದು ನಾನು ನಂಬಿದ್ದೇನೆ: ಕೆಲವರು ಪ್ರತಿನಿಧಿಗಳು ಕಾರ್ಯನಿರ್ವಹಿಸುವಂತಹ ವ್ಯವಸ್ಥೆಗಳಿಗೆ ಅಧಿಕಾರವನ್ನು ಆರೋಪಿಸುತ್ತಾರೆ.) ಪ್ರತಿನಿಧಿಗಳು ತಮ್ಮ ಹಿತಾಸಕ್ತಿಗಳನ್ನು ಮತ್ತು/ ಅಥವಾ ಇತರರ ಹಿತಾಸಕ್ತಿಗಳನ್ನು ಸಾಧ್ಯವಾಗುವ ಮಟ್ಟಿಗೆ ಮುಂದಕ್ಕೆ ತರಲು ಸಮರ್ಥರು ಎಂದು ಗುರುತಿಸುವುದು ನಮ್ಮ ಆಸಕ್ತಿಗಳಲ್ಲಿ ಒಂದಾಗಿದೆ. ಇನ್ನೊಬ್ಬರ ಹಿತಾಸಕ್ತಿಗಳನ್ನು ಎಷ್ಟರ ಮಟ್ಟಿಗೆ ಹಾನಿ ಮಾಡಲು ಸಾಧ್ಯವೆನ್ನುವುದನ್ನು ಗುರುತಿಸುವುದು ಮತ್ತೊಂದು ಆಸಕ್ತಿಯಾಗಿದೆ. ಮೂರನೆಯದು, ಒಬ್ಬ ಪ್ರತಿನಿಧಿ ಅಥವಾ ಪ್ರತಿನಿಧಿಗಳು ಇತರರ ಸ್ವಇಚ್ಛೆಯ ಒಪ್ಪಿಗೆಯನ್ನು ಒಳಗೊಂಡಿರಬಹುದಾದ ಅಥವಾ ಒಳಗೊಂಡಿರಲಾರದ ರೀತಿಗಳಲ್ಲಿ ನಿಯಂತ್ರಣವನ್ನು, ಅಧೀನವನ್ನು, ಅವಲಂಬನೆಯನ್ನು ಎಷ್ಟರ ಮಟ್ಟಿಗೆ ಪ್ರಚೋದಿಸಬಹುದು ಅಥವಾ ಪುನರಾವರ್ತಿಸಬಹುದು ಎಂದು ಗುರುತಿಸುವುದು ಮತ್ತೊಂದು ಆಸಕ್ತಿ ಆಗಿದೆ.

ವಿವಾದಾತ್ಮಕ ರಾಜಕೀಯ ಪರಿಣಾಮಗಳಿಂದ ಮುಕ್ತವಾಗಿರುವ ಯಾವುದೇ ಪಕ್ಷಾತೀತ, ಅಂಗೀಕೃತ, ಪ್ರತಿವಾದಿಸಲಾಗದೆ ಇರುವ ರೀತಿಯಲ್ಲಿ ಅಧಿಕಾರವನ್ನು ಪರಿಕಲ್ಪಿಸಲಾಗುವುದಿಲ್ಲ ಎನ್ನುವುದು ಎರಡನೇ ತೀರ್ಮಾನವಾಗಿದೆ. ಅಧಿಕಾರ, ಜವಾಬ್ದಾರಿ, ಮತ್ತು ಹಿತಾಸಕ್ತಿಗಳ ನಡುವಿನ ಸಂಬಂಧಗಳು ಇದಕ್ಕೆ  ಕಾರಣವಾಗಿದೆ. ಜವಾಬ್ದಾರಿಯನ್ನು ಆರೋಪಿಸುವುದು ಮತ್ತು ಪ್ರತಿನಿಧಿಗಳ ಹಿತಾಸಕ್ತಿಗಳು ಯಾವುದರ ಬಗ್ಗೆ ಇದೆ ಎನ್ನುವುದನ್ನು ಗುರುತಿಸುವುದು ಅಂತರ್ಗತವಾಗಿ ವಿವಾದಾಸ್ಪದವಾಗಿವೆ. ಅಧಿಕಾರವನ್ನು ಸೂಕ್ಷ್ಮವಾಗಿ ಅಥವಾ ವಿಶಾಲವಾಗಿ ಕಲ್ಪಿಸುವುದರಿಂದ ಹಾಗೂ ಒಂದು ಅಥವಾ ಹೆಚ್ಚು ಆಯಾಮಗಳನ್ನು ಸಂಯೋಜಿಸುವುದರ ಮೂಲಕ,  ಅದು ಹೇಗೆ ರೂಪಿಸಲಾಗಿದೆ ಎಂಬುದರ ವಿಭಿನ್ನ ಚಿತ್ರಗಳನ್ನು ನೀಡುತ್ತದೆ.

recommended readings

Robert A. Dahl. "A Critique of the Ruling Elite Model." *American Political Science Review* 52 (1958): 463–69.Compelling critique of Mills's view and his conclusions, advocating a behavioral approach and pointing to pluralist conclusions elaborated in the later works of Dahl and his colleagues.

Michel Foucault. *Power*, ed. J. D. Faubion. Vol. 3 of *Essential Works of Foucault*, *1954–1984* (New Press, 2000). A collection of shorter pieces relating to power, including Foucault's more rhetorical and extreme statements.

Steven Lukes. *Power: A Radical View*. 2nd ed. (Palgrave Macmillan, 2000). Surveys recent debates about power and defends the idea of "third-dimensional power" against critics.

C. Wright Mills. *The Power Elite* (Oxford University Press, 2000 [1956]). A modern classic, which deploys a view of power that is broad but methodologically inadequate.

Dennis Wrong. *Power: Its Forms, Bases and Uses* (Transaction Publishers, 1995 [1979]). A magisterial survey of debates about power.